ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Thursday, the 24th July, 1980/Shravana, 2, 1902 S.E.

The House met in the Assembly Chamber Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(To which oral answers were given)

Exemption of Water Rates

151. SRI K.H. HANUME GOWDA (Hassan).—Will the Chief Minister be pleased to state.—

(a) whether Government intend to exempt from payment of water rate in respect of Lands which are located within 100 acres or less achkat area of tanks and to bring into force the levy of tax on 'Tari and Bagayat' as in the past;

(b) whether the Government is aware that by doing this the ryots will be rid of the harassment and the revenue due to the government will be realised in time?

SRI S. BANGARAPPA (Minister for revenue and Agriculture) [on behalf of SRI R. GUNDU RAO (Chief Minister)].—

(a) No.

(b) According to Government Order No. PWD 80 LBW 79 dated 1-1-1980 water rates have been imposed on the lands which have been provided with water for irrigation after making joint inspection of the lands by the revenue and P. W. D. officers. As such there will be no harassment to the farmers.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ "ಇಲ್ಲ" ಎಂದು ಹೇಳಿದ್ದೀರಿ. ಆದರೆ ರಾಜ್ಯಕ್ಕೆ ಬರತಕ್ಕ ತೆರಿಗೆ ವಗೈರೆ ವಸೂಲು ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ. ನೀವು ದೊಡ್ಡ ದೊಡ್ಡ ಜಲಾಶಯಗಳನ್ನು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿದ್ದೀರಿ, ಅದರಲ್ಲಿ ನೀರು ತುಂಬಿದೆ. ನೀವು ನೀರನ್ನು ಕೊಡುವುದರಿಂದ ರೈತರು ಕಂದಾಯವನ್ನೂ ಕೊಟ್ಟೇ ಕೊಡುತ್ತಾರೆ. ಆದರೆ, ಇಲ್ಲಿ ನಾನು ಹೇಳುತ್ತಿರುವುದೇನೆಂದರೆ, ಕೆಲವು ಕೆರೆಗಳ ಹಿಂದೆ ೧೦೦ ಎಕರೆ ಅಚ್ಚುಕಟ್ಟಿ

ಗಿಂತ ಕಡಿಮೇ ಇರುತ್ತದೆ. ಕೆಲವು ಕೆರೆಗಳು ಎಷ್ಟೋ ಸಂದರ್ಭಗಳಲ್ಲಿ ಮಳೆ ಬಾರದೆ ತುಂಬುವುದೇ ಇಲ್ಲ. ಅಷ್ಟೇ ಅಲ್ಲ ಕೆರೆಗೆ ನೀರೇ ಬರುವುದಿಲ್ಲ. ಆಗ ೧–೨ ಎಕರೆಗೆ ಕೂಡ ನೀರು ಆಗುವುದಿಲ್ಲ. ಅಂಥ ಕಡೆಗಳಲ್ಲಿ ಹಿಂದೆ ಇದ್ದಂತೆ ತರಿ, ಬಾಗಾಯಿತು ಕಂದಾಯವನ್ನು ಮನ್ನಾ ಮಾಡುತ್ತೀರಾ ? ಸಾಮಾನ್ಯವಾಗಿ ೧ ಎಕರೆ ಅರ್ಧ ಎಕರೆ ಇರುವವರು ಬಹಳ ಬಡವರಾಗಿರುತ್ತಾರೆ, ಅಲ್ಲದೆ ಅನಕ್ಷರಸ್ಥರು ಕೂಡ ಆಗಿರುತ್ತಾರೆ. ಅಂಥವರಿಂದ ಕಂದಾಯವನ್ನು ವಸೂಲ್ಮಾಡಬಾರದೆಂದು ತಾವು ರೆವಿನ್ಯೂ ಅಧಿಕಾರಿಗಳಿಗೆ ಹೇಳಿರುವುದಾಗಿ ಹೇಳುತ್ತಿದ್ದೀರಿ. ನಮ್ಮ ಹಾಸನ ಜಿಲ್ಲೆಯಲ್ಲಿ ೩೫೦೦ ಕೆರೆಗಳಿವೆ. ಆದರೆ ಯಾವ ರೆವಿನ್ಯೂ ಅಧಿಕಾರಿಗಳೂ ಮತ್ತು ಪಿ. ಡಬ್ಲ್ಯೂ. ಡಿ. ಅಧಿಕಾರಿಗಳೂ ಜಾಯಿಂಟ್ ಇನ್ಸ್ಪೆಕ್ಷನ್ ಮಾಡುತ್ತಿಲ್ಲ. ಬಡವರ ಅರ್ಜಿಗಳನ್ನು ಅವರು ನೋಡೋವುದಿಲ್ಲ. ಅಂಥ ಪರಿಸ್ಥಿತಿ ಅಲ್ಲಿದೆ. ಆದ್ದರಿಂದ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಒಟ್ಟು ೧೦೦ ಎಕರೆಗಿಂತ ಕಡಿಮೆ ಆಚ್ಚುಕಟ್ಟು ಇರತಕ್ಕ ಕೆರೆಗಳ ಹಿಂದೆ ಕಂದಾಯವನ್ನು ವಜಾ ಮಾಡಿದರೆ ಆ ರೈತರಿಗೆ ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ವಿಲೇಜ್ ಅಕೌಂಟೆಂಟ್‌ರವರ ಕೈ ತಪ್ಪಿ ಅವರ ಕಿರುಕುಳಕ್ಕೆ ರೈತರಿಗೆ ಕಡಿಮೆಯಾಗುತ್ತದೆ. ಆದ್ದರಿಂದ ತಾವು ಇದನ್ನು ಪುನರ್‌ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—೧೦೦ ಎಕರೆಗಿಂತ ಕಡಿಮೆ ಆಚ್ಚು ಕಟ್ಟು ಇರತಕ್ಕ ಪ್ರದೇಶದಲ್ಲಿ ಕಂದಾಯ ೫೦–೬೦ ರೂಪಾಯಿ ಇರಬಹುದು. ಆದರೆ ನೀರಿನ ದರವನ್ನು ನಿಗದಿಮಾಡುವ ವಿಚಾರ ಇನ್ನೂ ಚರ್ಚೆಯಲ್ಲಿದೆ. ಇದನ್ನು ನಾನು ಒಪ್ಪುತ್ತೇನೆ. ಒಂದು ವೇಳೆ ಮಳೆ ಇಲ್ಲದೆ ಕೆರೆಗೆ ನೀರು ಬರದಿದ್ದರೆ ಅಸಿಸ್ಟೆಂಟ್ ಕಮಿಷನರ್‌ರವರೂ ಮತ್ತು ಪಿ. ಡಬ್ಲ್ಯೂ. ಡಿ. ಇಲಾಖೆಯ ಅಧಿಕಾರಿಗಳೂ ಜಾಯಿಂಟ್ ಇನ್ಸ್ಪೆಕ್ಷನ್ ಮಾಡಿ ನೀರು ಇದೆಯೋ ? ಇಲ್ಲವೊ ಎಂಬುದನ್ನು ನೋಡಿ ತೀರ್ಮಾನ ಮಾಡಬೇಕು ಕೆರೆಯಲ್ಲಿ ನೀರಿಲ್ಲದಿದ್ದರೆ ವಾಟರ್ ರೇಟನ್ನು ಫಿಕ್ಸ್ ಮಾಡಬಾರದೆಂದು ಕಾನೂನು ಇದೆ. ಆದರೆ ನಿಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಜಾಯಿಂಟ್ ಇನ್ಸ್ಪೆಕ್ಷನ್ ಮಾಡುತ್ತಿಲ್ಲ ಎಂಬುದು ನನಗೂ ಗೊತ್ತಿದೆ. ಏಕೆಂದರೆ ಅವರು ಜಾಯಿಂಟ್ ಇನ್ಸ್ಪೆಕ್ಷನ್ ಮಾಡಿದ್ದಿದ್ದರೆ ಇವತ್ತು ಇಂಥ ತೊಂದರೆಗಳು ಬರುತ್ತಿರಲಿಲ್ಲ. ನಾವು ಕಾನೂನು ಮಾಡಿದ್ದರೂ ನಮ್ಮ ಅಧಿಕಾರಿಗಳು ಅದನ್ನು ಸರಿಯಾಗಿ ಪಾಲಿಸುತ್ತಿಲ್ಲ. ಆದುದರಿಂದಲೇ ನಾವು ಈ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ. ಮತ್ತು ಇದನ್ನು ಯಾವ ರೀತಿ ತೀರ್ಮಾನ ಮಾಡಬೇಕೋ ಮಾಡುತ್ತೇವೆ. ಆದರೆ ನಾನು ಹೇಳುವುದು ಇಷ್ಟು ಮಾತ್ರ. ಕೆರೆಗೆ ನೀರು ಬಾರದಿದ್ದರೆ ರೈತರ ಮೇಲೆ ತೆರಿಗೆ ಹಾಕುವುದು ಬೇಡ, ಅದೇ ರೀತಿ ಕೆರೆಗೆ ನೀರು ಬಂದಾಗ ಸರ್ಕಾರಕ್ಕೆ ಬರತಕ್ಕ ತೆರಿಗೆಯನ್ನು ತಪ್ಪಿಸುವುದು ಬೇಡ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ತಮಗೆ ನಾನು ವಂದಿಸುತ್ತೇನೆ. ಆದರೆ, ಈ ವಿಚಾರ ತೀರ್ಮಾನವಾಗುವವರೆಗೂ ಬಡವರ ತಂಟೆಗೆ ಹೋಗಬೇಡಿ ಎಂದು ನಿಮ್ಮ ರೆವಿನ್ಯೂ ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಆಚ್ಚುಕಟ್ಟಿಗೆ ನೀರೇ ಇಲ್ಲದಿದ್ದರೆ ಅಲ್ಲಿ ಕಂದಾಯವನ್ನು ವಸೂಲ್ಮಾಡ ಬಾರದೆಂದು ಹೇಳಿದ್ದೇವೆ. ಆದರಲ್ಲೂ ಬಡವರು ಮತ್ತು ಸಣ್ಣಪುಟ್ಟ ಹಿಡುವಳಿದಾರರು ಯಾರಿದ್ದಾರೆ ಅವರ ತಂಟೆಗೆ ಹೋಗಲೇಬಾರದೆಂದು ಹೇಳಿದ್ದೇವೆ. ಈಗ ಮತ್ತೆ ಅವರಿಗೆ ಈ ವಿಚಾರವನ್ನು ತಿಳಿಸುತ್ತೇವೆ.

ಶ್ರೀ ಎ. ಜಿ. ಕೊಡಗಿ.—ನದಿಗಳ ನೀರನ್ನು ಉಪಯೋಗಿಸುವವರಿಗೆ ತೆರಿಗೆಯನ್ನು ಹಾಕುತ್ತಿದ್ದೇವೆ ನೀರು ಬರದಿದ್ದರೆ ಜಾಯಿಂಟ್ ಇನ್ಸ್ಪೆಕ್ಷನ್ ಮಾಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ತಮಗೆ ಬಂದಿರತಕ್ಕ ವರದಿಯ ಪ್ರಕಾರ ಜಾಯಿಂಟ್ ಇನ್ಸ್ಪೆಕ್ಷನ್ ಎಲ್ಲೂ ಮಾಡುತ್ತಿಲ್ಲ. ಆದರೂ ಸ್ವಾಭಾವಿಕವಾಗಿ ಎಲ್ಲ ಕಡೆಗಳಲ್ಲೂ ನೀರಿನ ತೆರಿಗೆಯನ್ನು ಹಾಕುತ್ತಿದ್ದಾರೆ. ಇದನ್ನು ಪರಿಹರಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ಶ್ರೀಮಾನ್ ಹನುಮೇಗೌಡರ ಪ್ರಶ್ನೆಯನ್ನೆಲ್ಲ ತಾವೂ ಕೂಡ ಪ್ರಸ್ತಾಪಮಾಡಿದ್ದೀರಿ. ಇದಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಇರಿಗೇಷನ್ ಆಕ್ಟ್ ಪ್ರಕಾರ ಅಸಿಸ್ಟೆಂಟ್ ಕಮಿಷನರ್ ಮತ್ತು ಪಿ. ಡಬ್ಲ್ಯೂ. ಡಿ. ಅಧಿಕಾರಿಗಳು ಜಾಯಿಂಟ್ ಇನ್ಸ್ಪೆಕ್ಷನ್ ಮಾಡಿ ತೀರ್ಮಾನ ಮಾಡಬೇಕು ಎಂದ ಆದರೆ ಈ ಅಧಿಕಾರಿಗಳು ಮಾಡುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಸತ್ಯ ಏನು ಎಂಬುದನ್ನು ನೋಡೋಣ. ಇವತ್ತಲ್ಲ ನಾಳೆ ಸತ್ಯ ಏನು ಎಂಬುದು ಗೊತ್ತಾಗು

ತ್ತದೆ. ಅಲ್ಲಿರತಕ್ಕ ವಿಲೇಜ್ ಅಕೌಂಟೆಂಟೋ ಅಥವಾ ಇನ್ನೊಬ್ಬನೋ ಆ ಸ್ಥಳಕ್ಕೆ ಹೋಗದೆ ಕೂತಲ್ಲೇ ಬಾಯಿಗೆ ಬಂದದ್ದು ಏನೋ ಬರೆದಿರುತ್ತಾರೆ ಅದನ್ನು ನಾವು ಈ ವಿಧಾನ ಸೌಧದಲ್ಲಿ ಕೂತುಕೊಂಡು ತೀರ್ಮಾನ ಮಾಡುವುದು ಸರಿಯಲ್ಲ. ಅನೇಕ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಮಲೆನಾಡಿನಲ್ಲಿ ಸಾವಿರಾರು ಕೆರೆಗಳಿವೆ. ಬಯಲು ಸೀಮೆಯಲ್ಲಿ ಕಡಿಮೆ ಇರಬಹುದು. ಇದರ ಬಗ್ಗೆ ನಾವು ಅನಿವಾರ್ಯವಾದ ಸ್ಥಿತಿಗತಿಗಳನ್ನು ನಾವು ತೀರ್ಮಾನ ಮಾಡಬೇಕಾಗಿದೆ. ಮಾನ್ಯ ದೇವೆಗೌಡರು, ನಾನು ಮತ್ತು ನೀವೂ ಇಲ್ಲಿ ಕೂತು ತೀರ್ಮಾನ ಮಾಡತಕ್ಕ ವಿಚಾರ ಇದಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ —ಸ್ವಾಮಿ, ತಾವು ಆಗಾಗ್ಗೆ ಟೂರ್ ಹೋಗುತ್ತಾ ಇರುತ್ತೀರಿ. ಯಾವುದಾದರೂ ಒಂದು ಹಳ್ಳಿಯ ಹತ್ತಿರ ೧೦-೨೦ ಎಕರೆ ಅಚ್ಚುಕಟ್ಟು ಇರತಕ್ಕ ರೈತರನ್ನು ಕರೆದು ಅಲ್ಲಿ ನೀವು ಹೋಗಿ ಇನ್‌ಸ್ಪೆಕ್ಷನ್ ಮಾಡಿದ್ದೀರಾ ? ಅಥವಾ ಇಲ್ಲಿ ಜಾಯಿಂಟ್ ಇನ್‌ಸ್ಪೆಕ್ಷನ್ ನಡೆದಿದೆಯೇ ? ಎಂದು ಅವರನ್ನು ಕೇಳಿದ್ದೀರಾ ? ಕಳೆದ ೭-೮ ವರ್ಷಗಳಲ್ಲಿ ಎಷ್ಟು ಸಾರಿ ಈ ರೀತಿ ಜಾಯಿಂಟ್ ಇನ್‌ಸ್ಪೆಕ್ಷನ್ ನಡೆದಿವೆ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುವುದಕ್ಕಿಂತ ಮುಂಚೆ ನಾನೇ ಎಲ್ಲ ವಿಚಾರಗಳನ್ನೂ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಟೂರ್ ಹೋಗಿದ್ದಾಗ ಒಂದೆರಡು ಕೆರೆಗಳನ್ನು ಮಾತ್ರ ಪರಿಶೀಲಿಸಿದ್ದೇನೆ. ನಾನು ಈಗಾಗಲೇ ಹೇಳಿದಂತೆ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.

Number of Colleges under the Jurisdiction of Bangalore University,

163. SRI M. GANGANNA (Kushtagi).—Will the Minister for Education be pleased to state:—

(a) the number of colleges affiliated to fhe Bangaiore University;

(b) the total amount of Scholarship and Freeships sanctioned to the Boys and Girls studying in Pre-Degree, Degree Classes during the year 1977-78. out of that, the amount given to the Sheshadripuram college;

(c) [on what] the basis on which the Scholarships and Freeships have been sanctioned;

(d) whether it has come to the notice of the Government that some students of Sheshadripuram College have not securred the Scholarship and Freeships even though they are eligible, as per Havanur Report;

(e) if so, the action proposed to be taken by the Government in the matter ?

SRI G.B. SHANKAR RAO (Minister for Education).—

(a) 94, out of this 58 are evening and Law Colleges.

(b) During the year 1977-78 Rs. 19,00,000 for scholarship and Rs: 1,35,00,000 for Freeship have been sanctioned. Out of that Rs. 14,037 for Scholarship and Rs. 39,798 for Freeship have been given to the Sheshadripuram College.